ಎಂ.ಎನ್. ಸೋಮಶೇಖರ್, ಮೈಸೂರು

*ಹಿಂದಿ ಭಾಷೆಯಲ್ಲಿ ಕಟ್ಟಾ ಎಂದರೆ ಹುಳ; ರಾಜ್ಯ ರಾಜಕೀಯದಲ್ಲಿ...?*



ಹುಳು!

ವೆಂಕಟೇಶ ಎಂ. ಪೈ, ಹೊನ್ನಾವರ

*ಕಪ್ಪು ಬೆಕ್ಕು ಕಂಡ್ರೆ ಅಪಶಕುನ; ಕಪ್ಪು ಹುಡುಗಿ ಕಂಡ್ರೆ...?*

ಶುಭಶಕುನ ಎಂದನಂತೆ ಡೌರಿಗಂಡು!

ಪ್ರಹ್ಲಾದರಾಜು ಬರ್ಲಿ, ದಾವಣಗೆರೆ

*ಕಾಸಿದ್ರೆ ಕೈಲಾಸ, ಕಾಸಿಲ್ಲದಿದ್ರೆ...?*

ಕೈ ಸಾಲ!

ಸಂಗೀತ ಜಿ. ಭಾರತೀನಗರ

*ವಿದ್ಯಾಭ್ಯಾಸ ಮಾಡುವಾಗ ಪ್ರೀತಿಸುವುದು ತಪ್ಪೇ?*

ಡ್ಯುಯೆಟ್‌ನಲ್ಲಿ ಪಾಸ್ ಆಗಿ ಸಬ್ಜೆಕ್ಟ್‌ನಲ್ಲಿ ಫೇಲ್ ಆಗಬಾರದಷ್ಟೆ!

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

*ನೀ ನುಡಿಯದಿರಲೇನು, ಬಯಲಾಗಿಹುದು ಎಲ್ಲಾ ಅಂತಾರಲ್ಲಾ ...?*

ತಿಳಿಯಿತು ಬಿಡಿ; ನೀವು ನಿದ್ರೆಯಲ್ಲಿ ಮಾತನಾಡುತ್ತೀರಿ!

ಕೊಂಡೆಸ್ಟ್ರೀಟ್ ಸುವರ್ಣ, ಮೂಡಬಿದಿರೆ

*ಲಿಂಗ ತಾರತಮ್ಯ ಎಂದರೇನು?*

ತಾರ ಸ್ತ್ರೀಲಿಂಗ, ತಮ್ಯ ಪುಲ್ಲಿಂಗ, ಸ್ತ್ರೀಲಿಂಗವನ್ನು ಹಿಂದಿಟ್ಟು ಪುಲ್ಲಿಂಗ ಮುಂದಿರುವುದೇ ತಾರತಮ್ಯ!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಅಳು: ಇದರ ನಿಜವಾದ ಅರ್ಥ?*



ಮಗುವಿನ ಮೊದಲ ಸದ್ದು, ಸೀರಿಯಲ್‌ನವರ ಬಂಡವಾಳ, ತಮಿಳು ಬ್ಯಾಂಡಿನ ಜೀವನೋಪಾಯ!

ಜಾಕೋಬ್ ಡಿಸೋಜ, ಕುರುವಳ್ಳಿ

*ಹೆಣ್ಣು ಕೊಡುವವರು ಭಾವಿ ಅಳಿಯನಿಗೆ ಕೇಳುವ ಮೊದಲ ಪ್ರಶ್ನೆ ಯಾವುದು?*

ಕೇಳುವುದರ ಮಾತು ಬಿಡಿ; ಕೇಳಬೇಕಾದ್ದು – ನಿಮಗೆ ಹೆಣ್ಣಿನ ಕೈ ಮುಖ್ಯವೋ, ಬೀಗದ ಕೈ ಮುಖ್ಯವೋ?

ಎಚ್.ಆರ್. ದೇಸಾಯಿ, ರಾಯಚೂರು

*ಶ್ರೀಕೃಷ್ಣ ಗೀತೋಪದೇಶವನ್ನು ಅರ್ಜುನನ ಬದಲು ದುರ್ಯೋಧನನಿಗೆ ಮಾಡಿದ್ದಿದ್ದರೆ?*

ಹುಚ್ಚುನಾಯಿಗೆ ಕಚ್ಚುವುದಕ್ಕೆ ಕ್ರ್ಯಾಷ್ ಕೋರ್ಸ್ ನಡೆಸಿದಂತಾಗುತ್ತಿತ್ತು!

ಪಿ.ಜೆ. ರಾಘವೇಂದ್ರ, ಮೈಸೂರು

*ರಾಜಕಾರಣಿಗಳಿಗೆ ಇನ್ನೂರು ವರ್ಷ ಆಯುಷ್ಯವಿದ್ದಿದ್ದರೆ ಭಾರತದಲ್ಲಿನ ಭ್ರಷ್ಟಾಚಾರ ಹೇಗಿರುತ್ತಿತ್ತು?*

ಅವರೇ ಮಾಡಿದ ಹಗರಣಗಳ ಶತಮಾನೋತ್ಸವವನ್ನು ಅವರೇ ಆಚರಿಸುವ ಮಟ್ಟಕ್ಕೆ!

ಲೋಕಪ್ರಿಯ, ಚಿಂತಾಮಣಿ

*ಗೃಹಿಣಿಯರು ಜಾಸ್ತಿ ಧಾರಾವಾಹಿಗಳಿಗೆ ಅಂಟಿಕೊಳ್ಳುತ್ತಾರೆ, ಏಕೆ?*

ಧಾರಾವಾಹಿ ಚ್ಯೂಯಿಂಗ್ ಗಮ್ ಅಲ್ಲವೇ... ಅಂಟು ಜಾಸ್ತಿ!

ನರಸಿಂಹ ಎಂ. ಪೈ. ಕಾಸರಕೋಡ

*ವೈದ್ಯರ ಕೈಗುಣದಲ್ಲಿ ಮತ್ತು ಗೃಹಿಣಿಯ ಕಾಲ್ಗುಣದಲ್ಲಿ ಏನಿದೆ?*

ಶುಭ ಗುಳಿಗೆ, ಶುಭ ಘಳಿಗೆ!

ಮುರಲೀಧರ ಕುಲಕರ್ಣಿ, ಬೀದರ್

*ಹೋಮ- ಹವನ ಮಾಡಿದರೂ ಮುಖ್ಯಮಂತ್ರಿಗಳ ಕುರ್ಚಿ ಉಳಿಯಲಿಲ್ಲವೇಕೆ?*

ಕೋಪದ ಜ್ವಾಲೆ, ದ್ವೇಷದ ಮಂತ್ರ ಇದ್ದದ್ದರಿಂದ ನೀರಿನಲ್ಲಿ ಹೋಮ ಆಯಿತಂತೆ!

ಎಂ.ಜಿ. ಶಿವರಾಂ, ಬೆಂಗಳೂರು

*ಪ್ರಜಾಪ್ರಭುತ್ವ ಷೇರ್ ಮಾರುಕಟ್ಟೆಯಂತೆ ಆಗಿಬಿಟ್ಟಿದೆಯಲ್ಲವೇ?*

ನಿಜ; ಆದರೆ ಇಲ್ಲಿ ಷೇರ್ ಇಲ್ಲ, ಇರುವುದೆಲ್ಲಾ ತೋಳ, ಹಂದಿ, ನರಿ, ಗೂಳಿಗಳೇ!

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

*ಅತ್ತೆಯ ಮನಸ್ಸನ್ನು ಗೆಲ್ಲುವ ಸೂತ್ರಗಳು ಯಾವುವು ಅಂಕಲ್?*

ಬಿ ಎ ರೋಮನ್ ವೈಲ್ ಇನ್ ರೋಮ್! ಅತ್ತೆಯ ಮನೆಯಲ್ಲಿ ಅತ್ತೆಯಂತೆಯೇ ಇರು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಬೂದಿಬಡುಕ ಶಿವನನ್ನೇಕೆ ಪಾರ್ವತಿ ಮದುವೆಯಾದಳು?*

ಹಿಮಾಲಯದ ಚಳಿಯಲ್ಲಿ ಬೆಚ್ಚಗಿರಬೇಕಲ್ಲಾ, ಅದಕ್ಕೇ... ಬೂದಿ ಮುಚ್ಚಿದ ಗಂಡ!

## ಬಹುಮಾನಿತ ಪ್ರಶ್ನೆ

ರತ್ನ ಅಶೋಕ ಗೊರವರ, ಮೊರಬ

*ಗಂಡ ಹೆಂಡಿರಲ್ಲಿ ತಂದಿಟ್ಟು ತಮಾಷೆ ನೋಡುವವರಿಗೆ ಏನು ಮಾಡಿದರೆ ನಾಚಿಕೊಳ್ಳುತ್ತಾರೆ?*

ನೋ ಎಂಟ್ರಿ ಫಾರ್ ಶಕುನಿ ಎಂಡ್ ಮಂಥರೆ ಎಂದು ಬೋರ್ಡ್ ಹಾಕಿಬಿಡಿ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ದೇವರನ್ನು ಕುರಿತು ತಪಸ್ಸು ಮಾಡಿದರೆ ರಂಬೆ ಏಕೆ ಪ್ರತ್ಯಕ್ಷವಾಗಬೇಕು?*

ರಂಬೆ ದೇವನ ರಿಸೆಪ್ಷನಿಸ್ಟ್; ಅವಳಿಗೇ ಮನಸೋತರೆ ಎಂಟ್ರಿಯಲ್ಲೇ ಎಕ್ಸಿಟ್!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಹಿಂದೆ ಬಿಜೆಪಿ ತತ್ವನಿಷ್ಠೆಗೆ ಹೆಸರಾಗಿತ್ತು. ಈಗ...?*

ಥತ್, ಅನಿಷ್ಟವೇ ಎನ್ನಿಸಿಕೊಳ್ಳುತ್ತಿದೆ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

*ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದರೆ...?*



ಉತ್ತರೋತ್ತರವಾಗಿ ಆಸಕ್ತಿ ಕೆರಳಿಸುತ್ತಿರುತ್ತದೆ!

ಕೆ.ಎನ್. ನಾರಾಯಣರೆಡ್ಡಿ, ಕೆಜಿಎಫ್

*ಸಾಹಿತಿಗಳ ಭಾಷಣಕ್ಕೂ, ರಾಜಕಾರಣಿಗಳ ಭಾಷಣಕ್ಕೂ ಏನು ವ್ಯತ್ಯಾಸ?*

ರಾಜಕಾರಣಿಗಳು ಆಗಾಗ್ಗೆ ಮೇಜು ಕುಟ್ಟುವುದರಿಂದ ನಿದ್ರಾಭಂಗವಾಗುತ್ತದೆ!

ಕಾ. ಪ್ರಕಾಶ್, ಕನಕಪುರ

*ಜೋಗಿ ಬಂತು, ಜೋಗಯ್ಯ ಬಂತು; ಮುಂದಿನ ಚಿತ್ರಗಳು...?*

ಹೋಗಿ, ಹೋಗಯ್ಯ!

■ ರಾಮ್